ಅಧ್ಯಾಯ : 23 ಮನುಕುಲದ ಕಥೆ

ಪಠ್ಯದ ಪ್ರಶ್ನೋತ್ತರಗಳು

ಬಿಟ್ಟಿರುವ ಜಾಗಗಳನ್ನು ಭರ್ತಿಮಾಡಿ

1. ಸ್ತನಿಗಳಲ್ಲಿ ಮಾನವರನ್ನು ಸೇರಿಸುವ ಗುಂಪಿನ ಹೆಸರು ________ (ಉತ್ತರ : ಪ್ರಾಮುಖಿ )
2. ನರ ಮತ್ತು ವಾನರಗಳ ಪೂರ್ವಜ ಜೀವಿಗಳಿಗೆ _________ಎಂಬ ಹೆಸರಿದೆ. (ಉತ್ತರ : ಡ್ರಯೋಪಿಥೀಕಸ್ )
3. ಭಾರತದಲ್ಲಿ ರಾಮಾಫಿಥಿಕಸ್ ನ ಅವಶೇಷಗಳನ್ನು __________ನಲ್ಲಿ ಪತ್ತೆ ಮಾಡಲಾಗಿದೆ. (ಉತ್ತರ : ಸಿವಾಲಿಕ್ ಬೆಟ್ಟದ ತಪ್ಪಲು )
4. ಹೋಮೋಸೆಫಿಯನ್ಸ್ ಮಾನವನ ಪ್ರಾರಂಭಿಕ ಹಂತಕ್ಕೆ _________ ಎಂಬ ಹೆಸರಿದೆ. ( ಉತ್ತರ :ನಿಯಾಂಡರ್ ಥಾಲ್ ಮಾನವ)
5. ಮಾನವನ ಪ್ರಭೇದದ ಉಪಗುಂಪುಗಳಿಗೆ ________ಎಂದು ಕರೆಯಲಾಗುತ್ತದೆ. (ಉತ್ತರ : ಹೋಮೋ ಸೆಫಿಯನ್ಸ್ )

ಇವುಗಳನ್ನು ಹೆಸರಿಸಿ

1. ಎರಡೂ ಕಣ್ಣುಗಳು ಮುಂಭಾಗಕ್ಕೆ ಹೋಗಿರುವ ಸ್ಥಿತಿ : ದ್ವಿನೇತ್ರ ದೃಷ್ಟಿ
2. ಆದಿಮಾನವನ ಅತ್ಯಂತ ಪ್ರಥಮ ರೂಪ : ಜಿಂಜಾಂಥ್ರೋಪಸ್
3. ಪೂರ್ವ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಪತ್ತೆಯಾಗಿರುವ ಆದಿ ಮಾನವರು :ಆಸ್ಟ್ರಲೋಪಿಥಿಕಸ್
4. ಅತ್ಯಂತ ಪ್ರಾಚೀನವಾದ ಮಾನವರೂಪಿ ಪಳೆಯುಳಿಕೆ :
5. ಹೋಮೋಸೆಫಿಯನ್ಸ್ ಪ್ರಭೇದದ ಪ್ರಾರಂಭಿಕ ಹಂತ : ನಿಯಾಂಡರ ಥಾಲ್ ಮಾನವ

ಈ ಪ್ರಶ್ನೆಗಳಿಗೆ ಉತ್ತರಿಸಿ

1. ರಾಮಾಫಿಥಿಕಸ್ ಹಂತದ ಲಕ್ಷಣಗಳನ್ನು ವಿವರಿಸಿ

   ಸುಮಾರು 13 ರಿಂದ 14 ಮಿಲಿಯನ್ ವರ್ಷಗಳ ಹಿಂದೆ ಬಾರತದ ಕೆಲವುಭಾಗಗಳಲ್ಲಿ ಕಾಣಿಸಿಕೊಂಡ ವಂಶ ರಾಮಾಪಿಥಿಕಸ್. ಈ ಹಂತವನ್ನು ಆಧುನಿಕ ಮಾನವನ ನಿಜವಾದ ಪೂರ್ವಜ ಎಂದು ಪರಿಗಣಿಸಲಾಗಿದೆ. ಕೇವಲ ಮುಖ ಮತ್ತು ದವಡೆ ಮೂಳೆಗಳ ಪಳೆಯುಳಿಕೆಗಳು ಮಾತ್ರ ದೊರೆತಿದೆ. ಈ ಮಾನವನ ಆಳ ದವಡೆಯ ತಲೆಬುರುಡೆ, ಸಣ್ಣ ಕೋರೆ ಹಲ್ಲು, ಚಪ್ಪಟೆ ದವಡೆ ಹಲ್ಲು ಹೊಂದಿದ್ದ ಮತ್ತು ಅರ್ಧ ನೇರ ನಿಲವು ಹೊಂದಿದ್ದ.ಈ ಹಂತದ ಆದಿ ಮಾನವನ ಅವಶೇಷಗಳನ್ನು ನಮ್ಮ ದೇಶದ ಸಿವಾಲಿಕ್ ಬೆಟ್ಟದ ತಪ್ಪಲಿನಲ್ಲಿ ಪಡೆಯಲಾಗಿದೆ. ರಾಮಾಪಿಥಿಕಸ್ ಹಂತವು ಆಸ್ಟ್ರೇಲಿಯಾ ಮತ್ತು ಆಫ್ರಿಕಾದ ವಿವಿಧ ಭಾಗಗಳಲ್ಲಿ ಹಂಚಿ ಹೋಗಿದೆ ಎಂದು ಅಂದಾಜಿಸಲಾಗಿದೆ. ಈ ಅವಧಿಯ ತರುವಾಯ ಭೂಮಿಯ ತಳಭಾಗದಲ್ಲಿ ಉಂಟಾದ ಸ್ಥಿತ್ಯಂತರಗಳಿಂದ ಹಾಗೂ ಹವಾಮಾನದಲ್ಲಿ ಉಂಟಾದ ವೈಪರಿತ್ಯಗಳಿಂದ ಭಾರೀ ಅರಣ್ಯ ಹುಲ್ಲುಗಾವಲುಗಳಾಗಿಬದಲಾದವು . ಇದು ಮಾನವ ವಿಕಾಸದ ಗತಿಯನ್ನು ಹೆಚ್ಚಿಸಿತು.

2. ಆಸ್ಟ್ರಲೋಫಿಥಿಕಸ್ ಹಂತ ರಾಮಾಪಿಥಿಕಸ್ ಹಂತಕ್ಕಿಂತ ಹೇಗೆ ಭಿನ್ನವಾಗಿದೆ ?

   ಸುಮಾರು ಐದು ಮಿಲಿಯನ್ ವರ್ಷಗಳ ಹಿಂದೆ, ಪೂರ್ವ ಮತ್ತು ದಕ್ಷಿಣ ಆಫ್ರಿಕಾದ ಒಣ ಪ್ರದೇಶಗಳಲ್ಲಿ ರಾಮಾಪಿಥಿಕಸ್ ನ ವಂಶಸ್ಥ ಹಂತವೊಂದು ಕಾಣಿಸಿಕೊಂಡಿತು. ಇದನ್ನು ಆಸ್ಟ್ರಲೋಪಿಥಿಕಸ್ ಎಂದು ಕರೆಯಲಾಗಿದೆ. ಈ ಹಂತವನ್ನು ಮೊದಲ ಮಾನವರು ಎಂದು ಗುರುತಿಸಲಾಗಿದೆ. ಈ ವ್ಯಕ್ತಿಗಳು ಕುಳ್ಳಗಿದ್ದು, ಸುಮಾರು ನಾಲ್ಕೂವರೆ ಅಡಿ ಎತ್ತರ ಇದ್ದರು.ಹಣೆಯ ಭಾಗ ಚಿಕ್ಕದಾಗಿತ್ತು. ಇವರಿಗಿಂತ ಎತ್ತರವಾಗಿದ್ದ ಗೊರಿಲ್ಲಾಗಳಿರುವಷ್ಟೇ ಮಿದುಳಿನ ಸಾಮರ್ಥ್ಯವಿತ್ತು. ಮಿದುಳು ಪೆಟ್ಟಿಗೆಯ ಗಾತ್ರ ಆಧುನಿಕ ಮಾನವನಿಗಿಂತ ಮೂರನೇ ಒಂದು ಭಾಗದಷ್ಟು ಕಡಿಮೆ ಇತ್ತು. ನೆಟ್ಟಗೆ ಚಲಿಸಬಲ್ಲ ಈ ಮಂದಿ ಗುಂಪುಗಳಲ್ಲಿ ಬೇಟೆ ಆಡುತ್ತಿದ್ದರು. ಕಲ್ಲಿನ ತುಂಡುಗಳನ್ನು ಅಥವಾ ಮೂಳೆಗಳನ್ನು ಸಲಕರಣೆಯಾಗಿ ಬಳಸುತ್ತಿದ್ದರು.

3. ಜಾವಾ ಮಾನವ ಮತ್ತು ಪೀಕಿಂಗ್ ಮಾನವನ ಬಗ್ಗೆ ಸಂಕ್ಷಿಪ್ತ ವಿವರಣೆ ಬರೆಯಿರಿ

   ಹೋಮೋ ಹ್ಯಾಬಿಲಸ್ ಮಾನವರು ಆಧುನಿಕ ಮಾನವನಿಗೆ ಸಮೀಪದ ಹಂತವಾದ ಹೋಮೋ ಎರೆಕ್ಟಸ್ ನ ಉಗಮಕ್ಕೆ ಕಾರಣರಾದರು. ಇದು ಸುಮಾರು 1.5 ಮಿಲಿಯನ್ ವರ್ಷಗಳ ಹಿಂದೆ ನಡೆಯಿತು. ಈ ಗುಂಪಿನ ಕೆಲವು ಹಂತಗಳನ್ನು ಜಾವಾ ಮಾನವ ಮತ್ತು ಪೀಕಿಂಗ್ ಮಾನವ ಎಂದು ಕರೆಯಲಾಗಿದೆ.

   <u>ಜಾವಾ ಮಾನವ</u> : ಇಂಡೋನೇಷ್ಯಾದ ಜಾವಾ ಎಂಬ ಪ್ರದೇಶದಲ್ಲಿ 1891ರಲ್ಲಿ ಡಚ್ ವಿಜ್ಞಾನಿ ಡುಬಾಯ್ಸ್ ನಡೆಸಿದ ಸಂಶೋಧನೆಯಲ್ಲಿ ದೊರೆತ ಮಾನವ ಪಳೆಯುಳಿಕೆಯಿಂದಾಗಿ ಜಾವಾ ಮಾನವ ಎಂಬ ಹೆಸರು ಬಂದಿದೆ. ಒಂದೂ ಮಗುವಿನದೂ

ಸೇರಿದಂತೆ ಅನೇಕ ವ್ಯಕ್ತಿಗಳ ಅವಶೇಷವನ್ನು ಹಾಗೂ ಅವನು ಬಳಸುತ್ತಿದ್ದ ಕೆಲವು ಒರಟು ಸಲಕರಣೆಗಳನ್ನೂ ಇಲ್ಲಿ ಪತ್ತೆ ಮಾಡಲಾಗಿತ್ತು.

**ಪೀಕಿಂಗ್ ಮಾನವ** : 1924 ರಲ್ಲಿ ಜಾವಾ ಮಾನವನ ರೀತಿಯ ಪಳೆಯುಳಿಕೆಗಳನ್ನು ಚೀನಾದ ಪೀಕಿಂಗ್ ನಲ್ಲಿ ಕೆನಡಾದ ವಿಜ್ಞಾನಿಗಳ ತಂಡವೊಂದು ಪತ್ತೆ ಮಾಡಿತ್ತು.ಇದು ಪೀಕಿಂಗ್ ಮಾನವನ ಸಂಶೋಧನೆಗೆ ಕಾರಣವಾಯಿತು. ಈ ಪಳೆಯುಳಿಕೆಗಳ ಜೊತೆಗೆ ಕಲ್ಲಿನಿಂದ ಮಾಡಲಾದ ಕೆತ್ತುವ ಸಲಕರಣೆಗಳೂ ಪತ್ತೆಯಾದವು. ಅಲ್ಲದೆ, ಅಲ್ಲಿ ಇದ್ದಿಲಿನ ತುಂಡುಗಳೂ ದೊರೆತಿದ್ದು, ಪೀಕಿಂಗ್ ಮಾನವ ಬೆಂಕಿಯನ್ನೂ ಬಳಸುತ್ತಿದ್ದ ಎಂಬುದಕ್ಕೆ ಪುಷ್ಟಿ ನೀಡಿದೆ.

4. ಮಾನವನ ಕುಲಗಳ ಬಗ್ಗೆ ವಿವರಣೆ ನೀಡಿ.

ಎಲ್ಲಾ ಮಾನವರನ್ನು ಹೋಮೋ ಸೆಫಿಯನ್ಸ್ ಎಂಬ ಪ್ರಭೇದದ ಅಡಿಯಲ್ಲಿ ಸೇರಿಸಲಾಗಿದೆ. ಮಾನವರ ಪ್ರಮುಖ ಗುಂಪುಗಳ ನಡುವೆ ನಿರ್ದಿಷ್ಟ ಭಿನ್ನತೆಗಳನ್ನು ಗುರುತಿಸಬಹುದು. ಚರ್ಮ, ಕೂದಲು ಕಣ್ಣುಗಳ ಬಣ್ಣ, ಮೂಗಿನ ಆಕಾರ, ದೇಹದ ಮೇಲಿರುವ ಕೂದಲಿನ ಹಂಚಿಕೆ, ತುಟಿಗಳ ಮಂದತೆ ಹೀಗೆ ಹಲವಾರು ಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರುತ್ತವೆ. ಇಂಥ ವ್ಯತ್ಯಾಸಗಳ ಆಧಾರದ ಮೇಲೆ ಮಾನವ ಶಾಸ್ತ್ರಜ್ಞರು ಮಾನವರಲ್ಲಿ ಕುಲಗಳು ಅಥವಾ ಗುಂಪುಗಳು ಗುರುತಿಸುತ್ತಾರೆ

**ಕಾಕಸಾಯಿಡ್ ಮಾನವರು** :ಚರ್ಮದ ಬಣ್ಣ ಕಂದಾಗಿದ್ದು, ನೀಲಿ ಅಥವಾ ಗಾಢ ಕಂದು ಬಣ್ಣದ ಕಣ್ಣುಗಳು, ಎತ್ತರದ ನಾಸಿಕ,ನೀಳವಾದ ನಾಸಿಕ ರಂಧ್ರಗಳು, ನೇರ ಅಥವಾ ಗುಂಗುರು ಕೂದಲಿನ ಮಾನವರು,ಯುರೋಪ, ಅಮೇರಿಕಾದ ಕೆಲ ಭಾಗಗಳು ಮತ್ತು ಭಾರತದಲ್ಲಿ ವಾಸಿಸುತ್ತಿರುವವರು

**ಮಂಗೋಲಾಯಿಡ್** :- ಹಳದಿ ಅಥವಾ ಕೆಂಪು ಛಾಯೆಯ ಚರ್ಮ, ದಪ್ಪವಾದ ತುಟಿಗಳು, ಅಗಲವಾದ ಮೂಗು,ನೇರವಾದ ಕೂದಲಗಳನ್ನು ಹೊಂದಿರುವ ಮಾನವರು,ಚೀನಾ, ಜಪಾನ್, ಮಂಗೋಲಿಯಾ ಹಾಗೂ ಮಲೇಷ್ಯಾದಲ್ಲಿ ವಾಸಿಸುವ ಜನ ಜೊತೆಗೆ ಎಸ್ಕಿಮೋಗಳು ಮತ್ತು ಅಮೇರಿಕನ್ ಭಾರತೀಯರು.

**ಕಾಂಗಾಯಿಡ್**:-ಕಪ್ಪು ಚರ್ಮ,ದಪ್ಪ ತುಟಿ,ಅಗಲ ನಾಸಿಕ ಗುಂಗುರು ಕೂದಲು ಇವರ ಲಕ್ಷಣ. ಇವರನ್ನು ನೀಗ್ರಾಯಿಡ್ ಎಂದು ಕರೆಯುತ್ತಾರೆ. ಬಹುತೇಕ ಮಧ್ಯ  ಮತ್ತು ದಕ್ಷಿಣ ಆಫ್ರಿಕಾದಲ್ಲಿ ಕಂಡುಬರುತ್ತಾರೆ.

**ಕ್ಯಾಪಾಯಿಡ್**:-ಕಪ್ಪು ಅಥವಾ ಕಂದು ಚರ್ಮವಿರುವ ಮಾನವರು ಆಫ್ರಿಕಾದ ಗುಹೆಗಳಲ್ಲಿ ವಾಸಿಸುವರು

**ಆಸ್ಟ್ರಲಾಯಿಡ್ ಮಾನವರು**:-ಕಂದು ಬಣ್ಣದ ಚರ್ಮ, ಗುಂಗುರು ಕೂದಲಿನ ಹಾಗೂ ಆಳವಾದ ಕಣ್ಣುಗುಡ್ಡೆಗಳಿರುವ ಮಾನವರು, ಆಸ್ಟ್ರೇಲಿಯಾದ ಮೂಲನಿವಾಸಿಗಳು

## ಹೆಚ್ಚುವರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಚಾರ್ಲ್ಸ್ ಡಾರ್ವಿನ್ ರವರು 'ದಿ ಡಿಸೆಂಟ್ ಆಫ್ ಮ್ಯಾನ್' ಎಂಬ ಪುಸ್ತಕದಲ್ಲಿ ಯಾವ ತತ್ವವನ್ನು ಪ್ರತಿಪಾದಿಸಿದ್ದಾರೆ?

ಚಾರ್ಲ್ಸ್ ಡಾರ್ವಿನ್ ರವರು 'ದಿ ಡಿಸೆಂಟ್ ಆಫ್ ಮ್ಯಾನ್' ಎಂಬ ಪುಸ್ತಕದಲ್ಲಿ ಮಾನವನರು ಮಂಗಗಳಿಂದ ವಿಕಾಸಗೊಂಡಿದ್ದಾರೆ ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ.

2. ನಾವೆಲ್ಲರೂ ಈ ಭೂ ಗ್ರಹದ ಮೇಲೆ ಅಪಾರವಾದ ವೈವಿಧ್ಯತೆಯನ್ನು ಕಾಣುತ್ತಿದ್ದೇವೆ. ಈ ವೈವಿಧ್ಯತೆಗೆ ಯಾವ ಪ್ರಕ್ರಿಯೆ ಕಾರಣವಾಗಿದೆ?

ಜೀವ ವಿಕಾಸ ಪ್ರಕ್ರಿಯೆ

3. ಜೀವ ವಿಕಾಸ ಪ್ರಕ್ರಿಯೆ ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಸಮರ್ಥ ವಿವರಣೆ ನೀಡಿದ ವಿಜ್ಞಾನ ಯಾರು?

ಚಾರ್ಲ್ಸ್ ಡಾರ್ವಿನ್

4. ಚಾರ್ಲ್ಸ್ ಡಾರ್ವಿನ್ ಎಂಬ ವಿಜ್ಞಾನಿ ಜೀವ ವಿಕಾಸ ಪ್ರಕ್ರಿಯೆಯ ಬಗ್ಗೆ ವಿವರಿಸಿರುವ ಪುಸ್ತಕದ ಹೆಸರೇನು? ಈ ಪುಸ್ತಕವನ್ನು ಯಾವ ವರ್ಷದಲ್ಲಿ ಪ್ರಕಟಿಸಿದರು?

ದಿ ಡಿಸೆಂಟ್ ಆಫ್ ಮ್ಯಾನ್ - 1971

5. ವರ್ಗೀಕರಣ ಶಾಸ್ತ್ರಜ್ಞರು  ಮಾನವನನ್ನು ಹೇಗೆ ವರ್ಗೀಕರಿಸಿದ್ದಾರೆ ?

ವರ್ಗೀಕರಣ ಶಾಸ್ತ್ರಜ್ಞರ ಪ್ರಕಾರ ಮಾನವನು ಸ್ತನಿ ವರ್ಗ, ಪ್ರಾಮುಖಿ ಗಣ,ಹೋಮಿನಿಡೇ ಕುಟುಂಬ ಮತ್ತು ಹೋಮೋ ಎಂಬ ಜಾತಿಗೆ ಸೇರಿದವನಾಗಿದ್ದಾನೆ.

6. ಪ್ರಾಮುಖಿಗಳ ಮುಖ್ಯ ಗುಣ ಲಕ್ಷಣಗಳೇನು?

- ಪ್ರಾಮುಖಿಗಳಲ್ಲಿ ಶಿರದ ಮುಂಭಾಗ ಚಪ್ಪಟೆಯಾಗಿ ಮುಖವಾಗಿದೆ.
- ತಲೆ ಚಿಪ್ಪಿನ ಬಹು ಭಾಗ ಕಣ್ಣುಗಳ ಹಿಂಭಾಗದಲ್ಲಿದೆ.
- ಕಣ್ಣು ಗಳು ಪಾರ್ಶ್ವ ಮುಖದ ಮುಂಭಾಗಕ್ಕೆ ಬದಲಾಗಿದ್ದು ದ್ವಿನೇತ್ರ ದೃಷ್ಟಿ ಸಾಧ್ಯವಾಗಿದೆ.
- ಬೆರಳುಗಳಲ್ಲಿ ಮುಕ್ತ ಚಲನೆ ಸಾಧ್ಯವಾಗಿದೆ. ಹೆಬ್ಬೆರಳು ಇತರ ಎಲ್ಲ ಬೆರಳುಗಳಿಗೆ ಮುಖಾಮುಖಿಯಾಗುವ ಸಾಮಥ್ರ್ಯ ಪಡೆದಿದೆ.
- ಬೆರಳ ತುದಿಗಳು ಉಗುರುಗಳಾಗಿ, ಮಿದುಳಿನ ಗಾತ್ರ ಹೆಚ್ಚಾಗಿದೆ.
- ಮರಿಗಳನ್ನು ಪೋಷಿಸಲು ಎರಡೇ ಸ್ತನ್ಯಗ್ರಂಥಿಗಳಿರುವುದು.
- ಮಿದುಳಿನ ಗಾತ್ರ ವಿಶೇಷವಾಗಿ ಮಹಾಮಸ್ತಿಷ್ಕದ ಗೋಳಗಳ ಗಾತ್ರ ಅಗಾಧವಾಗಿ ಹೆಚ್ಚಿರುವುದು.
- ಸಾಮಾನ್ಯವಾಗಿ ಪ್ರತಿ ಗರ್ಭಧಾರಣೆಯಲ್ಲಿ ಒಂದೇ ಒಂದು ಭ್ರೂಣ ಬೆಳವಣಿಗೆಯಾಗುವುದು.

7. ಪ್ರಾಮುಖಿಗಳಿಗೆ ಉದಾಹರಣೆ ಕೊಡಿ.

ಟಾರ್ಸಿಯರ್,ಪಾಲರ್ ಮಂಗ, ಇಂಡ್ರಿ, ಗೊರಿಲ್ಲಾ,ಲೋರಿಸ್, ಲೆಮೂರ್, ಮಾನವ

8. ಡ್ರಯೋಪಿಥಿಕಸ್ ನಿಂದ ಮಾನವನ ಪೂರ್ವಜನ ವಿಕಾಸವನ್ನು ವಿವರಿಸಿ

- 15 ಮಿಲಿಯನ್ ವರ್ಷಗಳ ಹಿಂದೆ ವಾನರಗಳ ಪೂರ್ವಜ ,ಅರ್ಧ ನೆಟ್ಟಗೆ ನಿಲ್ಲುತ್ತಿದ್ದ ಪ್ರಾಣಿ
- ವಿಕಾಸದ ಹಾದಿಯಲ್ಲಿ ಈ ಪ್ರಾಣಿಗಳು ಇನ್ನಷ್ಟು ಬಲಿಷ್ಠವಾದ ಹಾಗೂ ನೇರವಾದ ಕಾಲುಗಳ ಜೊತೆಗೆ ನಡೆಯಲು ಪೂರಕವಾಗಿರುವಂತಹ ಪಾದಗಳನ್ನು ಬೆಳಿಸಿಕೊಂಡವು
- ದ್ವಿನೇತ್ರ ದೃಷ್ಟಿ ಮತ್ತು ಅತ್ಯುತ್ತಮ ಶ್ರಾವ್ಯತೆ ಉಳಿಸಿಕೊಳ್ಳಲಾಯಿತು
- ಕಾಲುಗಳ ಹೆಬ್ಬೆರಳಿನ ಸುತ್ತಿಕೊಳ್ಳುವ ಸಾಮರ್ಥ್ಯ ನಶಿಸಲಾರಂಭಿಸಿತು
- ಮುಂಗಾಲುಗಳು ಹಿಡಿಯುವ ಸಾಮರ್ಥ್ಯ ಬೆಳೆಸಿಕೊಂಡವು
- ಸೊಂಟದ ಮೂಳೆಗಳಲ್ಲಿ ಮತ್ತು ಸಂಬಂದಿಸಿದ ಸ್ನಾಯುಗಳಲ್ಲಿ ಉಂಟಾದ ಬದಲಾವಣೆಗಳಿಂದ ನೆಟ್ಟಗೆ ನಿಲ್ಲತೊಡಗಿದವು
- ಸೊಂಟದ ಉದರ ಭಾಗಕ್ಕೆ ಆಧಾರ ನೀಡುವ ಸಲುವಾಗಿ ನಡುಕಟ್ಟು ಅಗಲವಾಯಿತು
- ತಲೆ ಚಿಪ್ಪಿನಿಂದ ಮಿದುಳು ಹೊರಬರುವ ರಂಧ್ರವು ಕೆಳಭಾಗಕ್ಕೆ ಸ್ಥಳಾಂತರಗೊಂಡಿರುವುದು.
- ಮಹಾಮಸ್ತಿಷ್ಕದ ಗಾತ್ರದಲ್ಲಿ ಗಣನೀಯ ಹಿರಿದಾಗುತ್ತ ಬಂದಿತು

9. ಜಿಂಜಾಂಥ್ರೋಪಸ್ ಎಂಬ ಆದಿ ಮಾನವ ಯಾವ ಯಾವ ಸಾಮರ್ಥ್ಯವನ್ನು ಹೊಂದಿದ್ದನು?

ಜಿಂಜಾಂಥ್ರೋಪಸ್ ಎಂಬ ಆದಿ ಮಾನವ ಬಲಿಷ್ಟವಾದ, ನೇರವಾದ ಕಾಲುಗಳನ್ನು ಹೊಂದಿದ್ದು ನೇರವಾಗಿ ನಿಲ್ಲಬಲ್ಲವನಾಗಿದ್ದನು ಹಾಗೂ ತಾನು ಹಿಡಿದುಕೊಂಡ ವಸ್ತುವಿನ ಮೇಲೆ ನೇರವಾಗಿ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಲು ಸಮರ್ಥನಾಗಿದ್ದನು. ಮತ್ತು ತನ್ನ ಕೈಗಳಿಂದ ವಸ್ತುಗಳನ್ನು ಬದಲಾಯಿಸುವ ಸಾಮಥ್ರ್ಯವನ್ನು ಪಡೆದಿದ್ದನು.

10. ಹೋಮೋ ಹ್ಯಾಬಿಲಸ್ ನ ಲಕ್ಷಣಗಳನ್ನು ಬರೆಯಿರಿ

11. ಆಸ್ಟ್ರಲೋಪಿಥಿಕಸ್ ವಂಶಜರು ಆಧುನಿಕ ಮಾನವನ್ನು ಹೋಲುವ ರೀತಿಯಲ್ಲಿ ವಿಕಾಸಗೊಳ್ಳತೊಡಗಿತು. ಈ ಹಂತವನ್ನು ಹೋಮೋ ಎಂಬ ಜಾತಿಗೆ ಸೇರಿಸಲಾಗಿದೆ.ಈ ಜಾತಿಯ ಅತ್ಯಂತ ಹಿಂದಿನ ತಲೆಬುರುಡೆಯ ಪಳೆಯುಳಿಕೆ ಸುಮಾರು 2.5 ಮಿಲಿಯನ್ ವರ್ಷಗಳ ಹಿಂದಿನದು. ಇದನ್ನು ವೈಜ್ಞಾನಿಕವಾಗಿ ಹೋಮೋ ಹ್ಯಾಬಿಲಸ್ ಎಂದು ಕರೆಯಲಾಗಿದೆ. ಇದರ ಮಿದುಳು ಪೆಟ್ಟಿಗೆಯ ಗಾತ್ರ 700 c.c ಇತ್ತು.ಕೈಕಾಲುಗಳ ಮೂಳೆಗಳು ಆಧುನಿಕ ಮಾನವನ ಮೂಳೆಗಳನ್ನು ಹೋಲುತ್ತದ್ದವು. ಇವರು ಅನೇಕ ಬಗೆಯ ಸಲಕರಣೆ ಹಾಗೂ ಆಯುಧಗಳನ್ನು ಬಳಸುತ್ತಿದ್ದರು

12. ನಿಯಾಂಡರ್ ಥಾಲ್ ಮಾನವನ ಕುರಿತು ಬರೆಯಿರಿ

ಹೋಮೋ ಸೆಫಿಯನ್ಸ್ ಪ್ರಭೇಧದ ಪ್ರಾರಂಭಿಕ ಹಂತವನ್ನು ನಿಯಾಂಡರ್ ಥಾಲ್ ಮಾನವ ಎಂದು ಗುರುತಿಸಲಾಗಿದೆ. ನಿಯಾಂಡರ್ ಥಾಲ್ ಮಾನವನ ಮೊದಲ ಪಳೆಯುಳಿಕೆ ಜರ್ಮನಿಯ ನಿಯಾಂಡರ್ ಥಾಲ್ ಕಣಿವೆಯಲ್ಲಿ 1856 ರಲ್ಲಿ ಪತ್ತೆ ಮಾಡಲಾಯಿತು. ಯುರೇಸಿಯಾ ಮತ್ತು ಆಫ್ರಿಕಾದ ಉತ್ತರ ಭಾಗಗಳಲ್ಲಿ ಕಳೆದ ಹಿಮಯುಗಕ್ಕೆ ಸ್ವಲ್ಪ ಮುಂಚೆ ಈ ಮಾನವ ಕಾಣಿಸಿಕೊಂಡಿದ್ದ, ಕುಳ್ಳಾದ, ಸುದೃಢನಾದ ಹಾಗೂ ಬಲಶಾಲಿಯಾದ ದೇಹ ಅವನಿಗಿತ್ತು. ಹುಬ್ಬು ಅತ್ಯಂತ ದಟ್ಟವಾಗಿತ್ತು. ಜಾರುತ್ತಿರುವ ಹಣೆ, ಚಿಕ್ಕದಾದ ಕೆನ್ನೆಗಳು ಹಾಗೂ ಮುಂದಕ್ಕೆ ಚಾಚಿದ ದವಡೆ ಪ್ರಮುಖ ಲಕ್ಷಣಗಳಾಗಿದ್ದವು. ಸಲಕರಣೆಗಳ ತಯಾರಿಕೆಯಲ್ಲಿ ನಿಷ್ಣಾತನಾಗಿದ್ದ, ಅಲ್ಲದೆ ಭಾಷೆಯನ್ನು ರೂಪಿಸಿ ಬಳಸುತ್ತಿದ್ದ ಎಂದು ಅಂದಾಜಿಸಲಾಗಿದೆ.

13. ನಿಯಾಂಡರ್ ಥಾಲ್ ಮಾನವನ ಅವನತಿಗೆ ಕಾರಣಗಳೇನು ?

ನಿಯಂಡರ್ ಥಾಲ್ ಮಾನವ ಸುಮಾರು 50000 ವರ್ಷಗಳ ಹಿಮಪಾತದ ಸಂದರ್ಭದಲ್ಲಿ ನಾಶಗೊಂಡಿರಬಹುದು. ಆತ ವಿನಾಶಗೊಂಡಿದ್ದಕ್ಕೆ ಕಾರಣಗಳನ್ನು ಹುಡುಕುವ ಹಲವಾರು ಸಿದ್ಧಾಂತಗಳಿವೆ. ಒಂದು ವಿವರಣೆಯ ಪ್ರಕಾರ ಆಧುನಿಕ ಮಾನವನ್ನು ಬಹುತೇಕ ಹೋಲುವ ವ್ಯಕ್ತಿಗಳಿಂದ ಹಲ್ಲೆಗೊಳಗಾಗಿರುವ ಸಾಧ್ಯತೆ ಇದೆ. ಅತ್ಯಂತ ಸಮರ್ಥವಾದ ಸಲಕರಣೆಗಳನ್ನು ಹಾಗೂ ಅತ್ಯಂತ ಸಮರ್ಥವಾದ ಸಲಕರಣೆಗಳನ್ನು ಹಾಗೂ ಶಸ್ತ್ರ ಬಳಸುತ್ತಿದ್ದ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತವಾದ ಮಾನವ ಗುಂಪಿನಿಂದ ಸ್ಪರ್ಧಿಸಲಾಗದೇ ವಿನಾಶ ಗೊಂಡಿರುವ ಸಾಧ್ಯತೆ ಇದೆ.

14. ಕ್ರೋಮ್ಯಾಗ್ನಾನ್ ಮಾನವನ ಕುರಿತು ಟಿಪ್ಪಣಿ ಬರೆಯಿರಿ.
ಹೋಮೋ ಸೆಪಿಯನ್ ಮಾನವನ ಎರಡನೆ ಹಂತ. ಕ್ರೋಮ್ಯಾಗ್ನಾನ್ ಎಂಬ ಪ್ರದೇಶದಲ್ಲಿ ಈ ಪಳೆಯುಳಿಕೆಗಳನ್ನು ಮೊದಲು ಪತ್ತೆ ಮಾಡಲಾಗಿದೆ ಈ ಮಾನವ ಸುಮಾರು 30,000 ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಅಂದರೆ ಹಿಮಯುಗದ ಅಂತ್ಯಕ್ಕೆ ಜೀವಿಸಿದ್ದ. ಎತ್ತರದ ನಿಲುವು, ಚಟುವಟಿಕೆಯಿಂದ ಕೂಡಿದ್ದನಷ್ಟೇ ಅಲ್ಲ ಬುದ್ಧಿವಂತನೂ ಆಗಿದ್ದ . ಫ್ರಾನ್ಸ್ ಹಾಗೂ ಸ್ಪೇನ್ ದೇಶದ ಗುಹೆಗಳಲ್ಲಿರುವ ಚಿತ್ರದಿಂದ ಪ್ರಾಣಿಗಳನ್ನು ಪಳಗಿಸಿದ್ದ ಎಂದು ತಿಳಿದು ಬಂದಿದೆ ಅತ್ಯಂತ ಹರಿತವಾದ ಬಾಣ ಹಾಗೂ ಈಟಿಗಳನ್ನು ಬಳಸುತ್ತಿದ್ದ

15. ಹೋಮೋ ಜಾತಿಗೆ ಸೇರಿದ ಅತ್ಯಂತ ಹಿಂದಿನ ತಲೆ ಬುರುಡೆಯ ಪಳೆಯುಳಿಕೆಯ ವೈಜ್ಞಾನಿಕ ಹೆಸರೇನು?
**ಹೋಮೋ ಹ್ಯಾಬಿಲಸ್**

16. ಹೋಮೋ ಎರೆಕ್ಟಸ್ ನ ಮುಖ್ಯವಾದ ಎರಡು ಹಂತದ ಮಾನವರ ಹೆಸರೇನು?
ಜಾವಾ ಮಾನವ ಹಾಗೂ ಪೀಕಿಂಗ್ ಮಾನವ

17. ಆಧುನಿಕ ಮಾನವನ ಪ್ರಭೇದವನ್ನು ಹೆಸರಿಸಿ.
**ಹೋಮೋ ಸೆಪಿಯನ್ಸ್**

18. ಮಾನವರ ಪ್ರಮುಖ ಗುಂಪುಗಳ ನಡುವೆ ಇರುವ ನಿರ್ದಿಷ್ಟ ಬಿನ್ನತೆಗಳ ಆಧಾರದ ಮೇಲೆ ಗುರುತಿಸಲಾಗಿರುವ ಪ್ರಮುಖ ಕುಲಗಳಾವುವು?
ಕಾಕಸಾಯಿಡ್, ಮಂಗೋಲಾಯಿಡ್, ಕಾಂಗಾಯಿಡ್, ಕ್ಯಾಪಾಯಿಡ್ ಮತ್ತು ಆಸ್ಟ್ರಲಾಯಿಡ್ ಮಾನವರು.

19. ಕ್ರೋಮ್ಯಾಗ್ನಾನ್ ಮಾನವ ಹಾಗೂ ಆಧುನಿಕ ಮಾನವನ ನಡುವಿನ ವ್ಯತ್ಯಾಸವೇನು?
ಕ್ರೋಮ್ಯಾಗ್ನಾನ್ ಮಾನವ ಎತ್ತರದ ನಿಲುವನ್ನು ಹೊಂದಿದ್ದು, ಚಟುವಟಿಕೆಯಿಂದ ಕೂಡಿದ್ದು ಬುದ್ಧಿವಂತನಾಗಿದ್ದನು. ಕಲ್ಲಿನಿಂದ ಮಾಡಿದ ಹರಿತವಾದ ಬಾಣ ಮತ್ತು ಈಟಿಗಳನ್ನು ಬಳಸಿ ಪ್ರಾಣಿಗಳನ್ನು ಪಳಗಿಸುವಲ್ಲಿ ಶಕ್ತನಾಗಿದ್ದನು. ಆದರೆ ಆಧುನಿಕ ಮಾನವ ಸಾಂಸ್ಕೃತಿಕವಾಗಿ ಹೆಚ್ಚು ಮುಂದುವರಿದಿದ್ದು, ಆಲೋಚಿಸುವ, ನೆನಪಿಟ್ಟುಕೊಳ್ಳುವ, ಮಾತನಾಡುವ, ಓದುವ ಹಾಗೂ ಬರೆಯುವ ಸಾಮರ್ಥ್ಯ ಪಡೆದಿದ್ದಾನೆ ಪ್ರಾಣಿ ಗಳನ್ನು ಪಳಗಿಸುವುದಲ್ಲದೆ ಸಾಕಿಕೊಳ್ಳಲು ಪ್ರಾರಂಬಿಸಿದ್ದಾನೆ. ತನ್ನ ಬುದ್ಧಿವಂತಿಕೆಯಿಚಿದ ವಿಜ್ಞಾನ, ತಂತ್ರಜ್ಞಾನ ಹಾಗೂ ವ್ಯವಸಾಯ ಕ್ಷೇತ್ರದಲ್ಲಿ ಅಬಿವೃದ್ಧಿ ಪಡಿಸಿದ್ದಾನೆ.

**ಕೆಳಗಿನ ವಾಕ್ಯಗಳಲ್ಲಿರುವ ಖಾಲಿ ಜಾಗಗಳನ್ನು ಸರಿಯಾದ ಉತ್ತರ ಆರಿಸಿ ಭರ್ತಿ ಮಾಡಿರಿ.**

1. 1859 ರಲ್ಲಿ ಥಿಯರಿ ಆಫ್ ನ್ಯಾಚುರಲ್ ಸೆಲೆಕ್ಷನ್ ಎಂಬ ಪುಸ್ತಕವನ್ನು ________________ಎಂಬ ವಿಜ್ಞಾನಿ ಪ್ರಕಟಿಸಿದನು. (ಉತ್ತರ : ಚಾರ್ಲ್ಸ್ ಡಾರ್ವಿನ್ )
2. ಜೀವ ವಿಕಾಸಕ್ಕೆ ನೇರವಾದ ಸಾಕ್ಷ್ಯಾಧಾರಗಳು ___________________ಅಧ್ಯಯನದಿಂದ ಒದಗುತ್ತದೆ. (ಉತ್ತರ: ಪಳೆಯುಳಿಕೆಗಳು )
3. ವಾನರಗಳ ಪೂರ್ವಜ ಪ್ರಾಣಿಯನ್ನು __________ ಎಂದು ಕರೆಯಲಾಗಿದೆ. (ಉತ್ತರ : ಡ್ರಯೋಪಿಥಿಕಸ್ )
4. ಎಸ್ಕಿಮೋಗಳು _______________ ಮಾನವರು ( ಉತ್ತರ : ಮಂಗೋಲಾಯಿಡ್ )
5. ವಿಕಾಸದ ಹಾದಿಯಲ್ಲಿ ಹೋಮೋ ಹ್ಯಾಬಿಲಸ್ ಮಾನವರು ಆಧುನಿಕ ಮಾನವನಿಗೆ ಅತ್ಯಂತ ಸಮೀಪದ ಹಂತವಾದ ___________ನ ಉಗಮಕ್ಕೆ ಕಾರಣರಾದರು. (ಉತ್ತರ ಹೋಮೋ ಎರೆಕ್ಟಸ್ )
6. ರಾಮಾಪಿಥಿಕಸ್ ನಲ್ಲಿ ಪಿಥಿಕಸ್ ಎಂದರೆ _______ ಎಂದರ್ಥ. ( ಉತ್ತರ : ವಾನರ )
7. ಆಸ್ಟ್ರಲೋಪಿಥಿಕಸ್ ಎಂದರೆ _______ ಎಂದರ್ಥ. ಉತ್ತರ: ( ದಕ್ಷಿಣದ ವಾನರ)

************